ನಿಮ್ಮ ಮೊಬೈಲ್ ಫೋನ್ ಅನ್ನು ಸ್ವಿಚ್ ಆಫ್ ಮಾಡಿ” ಅಂತ. ನಿಮಗೆ ವ್ಯತ್ಯಯ ಎನ್ನುವ ಪದದ ಅರ್ಥ ತಿಳಿದರೂ ಸರಿಯೇ ಇಲ್ಲದಿದ್ದರೂ ಆಯ್ತು, ಕಾರ್ನಾಡರು ಹೇಳುತ್ತಿರುವ ಧ್ವನಿಯ ತೂಕದ ಮೇಲೆಯೇ ಇವರು ಖಂಡಿತಾ ಮೊಬೈಲು ಆಫ್ ಮಾಡಲು ಹೇಳುತ್ತಿದ್ದಾರೆ ಎನ್ನುವುದು ಖಡಾಖಂಡಿತವಾಗಿ ಗೊತ್ತಾಗುತ್ತದೆ.

ದಯವಿಟ್ಟು ನಾಟಕ ನೋಡುವಾಗ ಮಾನಸಿಕವಾಗಿ ಸಂಪೂರ್ಣ ‘ರಂಗ ಪ್ರವೇಶ’ ಮಾಡಿ. ಆಗಾಗ ಹೊರಗಿನ ಜಗತ್ತು ಕಾಣಿಸಿದರೂ ಮತ್ತೆ ರಂಗದ ಮೇಲೆ ತನ್ಮಯರಾಗಿ. ಸ್ವಲ್ಪ ದಿನಗಳ ಅನಂತರ ಅದೆಂಥಾ ‘ಮಾಯೆ’ ಎನ್ನುವುದು ಗೊತ್ತಾಗುತ್ತದೆ.

ಅಲ್ಲಿ ಕಾಡೇ ಇಲ್ಲ, ಆದರೆ ಬಿಟ್ಟೂಬಿಡದೆ ಕಾಡುತ್ತದೆ. ಮರಗಳಿಲ್ಲ, ಆದರೆ ನಿಮಗೆ ಬಿಳಲುಗಳು

